Regd No B G 155 15-2-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

# ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [ 2 ಪೈ,ಸೆ

## ಬೆಳಗಾಂನಲ್ಲಿ ಲಾಠಿ ಪ್ರಹಾರ

ಬೆಳಗಾಂನಲ್ಲಿ ನಿನ್ನೆ ಮಹಾರಾಷ್ಟ್ರ ಏಕೀಕರಣ ಸಮಿತಿ ಮತ್ತು ಆಡಳಿತಕಾಂಗ್ರೆಸ್ ಪಕ್ಷ ಕರೆದಿದ್ದ ಹರತಾಳ ಅಷ್ಟು ಯಶಸ್ವಿ ಆಗಲಿಲ್ಲ

ವಿವರಣೆ ಇಲ್ಲ

ಇಂಡಿಕೇಟ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಜಗಜೀವನರಾಂರವರು ಹೈದರಾಬಾದಿನಲ್ಲಿ ಮಾತನಾಡುತ್ತಾ, ತೆಲಂಗಾಣಾ ಸಮಸ್ಯೆಗೆ ಪರಿಹಾರ ಕಂಡುಹಿಡಿದಿರುವುದಾಗಿ ತಿಳಿಸಿದರು. ಆದರೆ ವಿವರಣೆ ಕೊಡಲಿಲ್ಲ.

★

ರಾಜ್ಯಕ್ಕೆ ಸಾಲದು

ಮಂಗಳೂರಿಗೆ ತೊಂಬತ್ತೈದು ಕಿಲೊ ಮೀಟರ್ ದೂರವಿರುವ ಏಳ್ನೂರು ಅಡಿಗಳ ಉದ್ದದ ಗಂಗೋಲಿಯನ್ನು ಉದ್ಘಾಟನೆ ಮಾಡುತ್ತಾ, ನಾಲ್ಕನೇ ಯೋಜನೆಯಲ್ಲಿ ಮೈಸೂರು ರಾಜ್ಯದ ರೇವುಗಳ ಅಭಿವೃದ್ಧಿಗಾಗಿ ಮಾಡಿರುವ ಹಣ ಸಾಕಷ್ಟಿಲ್ಲವೆಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿಮಾಡಿರುವುದಾಗಿ ರಾಜ್ಯಪಾಲ ಶ್ರೀ ಧರ್ಮವೀರರವರು ತಿಳಿಸಿದರು

ಸುಗ್ರೀವಾಜ್ಞೆ

ಸೆಪ್ಟೆಂಬರ್ 10 ನೇ ತಾ. ಸುಪ್ರೀಂ ನ್ಯಾಯಾಲಯ ರದ್ದು ಮಾಡಿದ ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣವನ್ನು ಕ್ರಮಬದ್ಧ ಮಾಡುವ ಸುಗ್ರೀವಾಜ್ಞೆ ಕ್ರಮ ಗೊಳಿಸಲು ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ನಿನ್ನೆ ಸಿನ್ನೆ ಘೋಷಿಸಿದರು

ಈ ತಿಂಗಳು 20 ನೇ ತಾ. ನಿಂದ ಆರಂಭವಾಗುವ ಸಂಸತ್ ಅಧಿವೇಶನದಲ್ಲಿ ಸುಗ್ರೀವಾಜ್ಞೆ ಬದಲಿಸಲು ಶಾಸನ ತರುವ ನಿರೀಕ್ಷೆ ಇದೆ.

○

ಕೈಗಾರಿಕೆಗೆ ಕರೆ

ಮೈಸೂರುನಗರ ಸುತ್ತ ಎರಡುಮೂರು ಭಾರಿ ಕೈಗಾರಿಕೆಗಳು ಸ್ಥಾಪನೆ ಆಗಬೇಕೆಂದು ಸೂಪರ್‌ಟೆಂಡಿಂಗ್ ಇಂಜಿನಿಯರ್ ಶ್ರೀ ಲಕ್ಷ್ಮೀನರಸಪ್ಪ ತಿಳಿಸಿರುವರು.

ಬೆಳಗಾಂನಲ್ಲಿ ನಿನ್ನೆ ಸಂಸ್ಥಾ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರ ಭಾರಿ ಮೆರವಣಿಗೆ, ಮರಾಠಿಜನರೇ ಹೆಚ್ಚಿರುವ ಬೆಳಗಾಂನ ಮಹಾರಾಷ್ಟ್ರ ಜೌಕಕ್ಕೆ ಬಂದಾಗ ಗೊಂದಲವಾಗಿ ಪೋಲೀಸರು ಲಾಠಿ ಪ್ರಹಾರ ಮಾಡಲು ನಾಲ್ಕು ಜನರು ಗಾಯಗೊಂಡರು. ಕಲ್ಲಿನೇಟಿನಿಂದ ಹದಿನೆಂಟು ಮಂದಿ ಪೋಲೀಸರು ಗಾಯವನ್ನು ಪಡೆದರು. ಖಾಡೆ ಪೇಟೆ ಮತ್ತು ರಾನುದೇವಗಲ್ಲಿ ಸೇರುವ ಸ್ಥಳದಲ್ಲಿ ಮರಾಠಿ ಮಾತನಾಡುವ ಜನ ಕರಿ ಬಾವುಟ ಪ್ರದರ್ಶಿಸಿ ಘೋಷಣೆಗಳನ್ನು ಕೂಗಿದರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಾ. ನಾಗಪ್ಪ ಆಳ್ವ ಮತ್ತು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲ್‌ರೊಡನೆ ಸರ್ಕ್ಯೂಟ್ ಹೌಸ್‌ನಿಂದ ರಾಜಕೀಯಸಮ್ಮೇಳನ ನಡೆಯುವ ಸ್ಥಳಕ್ಕೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಆಕರ್ಷಿತ ಮೆರವಣಿಗೆಯಲ್ಲಿ ಹೋದರು. ಅವರು ಕುಳಿತಿದ್ದ ಎತ್ತಿನ ಗಾಡಿ ಅಲಂಕೃತವಾಗಿ ನೂರು ಜೊತ ಎತ್ತುಗಳು ಎಳೆದವು.

● ತಮಿಳು ನಾಡಿನಲ್ಲಿರುವ ಹೊಸರನ್ನು ಆಂಧ್ರ ಕೇಳಲಿದೆ.

○ ನಾಳೆ ರಂಗೂನಿನಲ್ಲಿ ನಡೆಯುವ ವಜ್ರ ಹರಾಜಿನಲ್ಲಿ ಭಾರತ ಭಾಗವಹಿಸುವುದು.

○ ಅಹಮದಾಬಾದಿನ ಕಾಪ್ಪರ ರಸ್ತೆಯಲ್ಲಿ ಮನೆ ಕುಸಿದು ನಾಲ್ವರು ಕಾರ್ಮಿಕರು ಸತ್ತರು.

○ ಕೇರಳದ ಅಚ್ಚುತ ಮೆನನ್ ಸರ್ಕಾರದ ವಿರುದ್ಧ ಮಾರ್ಕ್ಸಿಸ್ಟರು ಕೈಗೊಂಡಿರುವ ಹೋರಾಟದಲ್ಲಿ ಜನರ ಮೇಲೆ ಹೇಸಿಗೆ ಎಸೆತ ಹೊಸದಾಗಿದೆ ಎಂದು ಕಲ್ಲೀಕೋಟೆ ವಾರ್ತೆ.

★ ಪೂರ್ವ ಜರ್ಮನಿಯಿಂದ ಭಾರತ 5 ಲಕ್ಷ ರೂಪಾಯಿನ ಒರಟು ವಜ್ರವನ್ನು ಆಮದು ಮಾಡಿಕೊಳ್ಳುವ ಒಪ್ಪಂದ ಮಾಡಿಕೊಂಡಿದೆ.

## ಪ್ರಕಟಣೆ

1968 – 69 ಮತ್ತು 1969 – 70 ನೇ ಸಾಲಿನ ತಮ್ಮ ರಿಜಿಸ್ಟ್ರೇಷನ್ 31–3–1970 ಕ್ಕೆ ಮುಗಿಯುವುದೆಂದು ಈ ವಿಭಾಗದ 4 ಮತ್ತು 5 ನೇ ವರ್ಗದ ರಿಜಿಸ್ಟರ್ ಆದ ಎಲ್ಲ ಕಂಟ್ರಾಕ್ಟರ್‌ಗಳ ಗಮನಕ್ಕೆ ಈ ಮೂಲಕ ಪ್ರಕಟಿಸಿದೆ. 1970 – 71 ಮತ್ತು 1971 – 72 ನೇ ಸಾಲಿಗೆ ರಿಜಿಸ್ಟ್ರೇಷನ್ ರಿನ್ಯೂ ಮಾಡಿಸಲು ವಿಧಾಯಕವಾದ ಫಾರಂನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು. ಈ ಕಚೇರಿಯ ಹೆಸರಿನಲ್ಲಿ (ಎಕ್ಸಿಕ್ಯೂಟೀವ್ ಇಂಜಿನಿಯರ್, ಸಿಹೆಚ್‌ಇ ವಿಭಾಗ, ಮೈಸೂರು) ರಿನ್ಯೂ ಮಾಡಿಸಲು ವಿಧಾಯಕವಾದ ಶುಲ್ಕ ರೂ. 20/– ನ್ನು XXXVII ಪಬ್ಲಿಕ್ ವರ್ಕ್ಸ್ ಲೆಕ್ಕಕ್ಕೆ ಜಮಾ ಮಾಡಿದ ಚಲನ್ – ಜಿ. ಮಿಸಲೇನಿಯಸ್ 2 ಇತರ ರಶೀತಿಗಳೊಡನೆ 31–3–1970 ಅಥವಾ ಅದಕ್ಕೆ ಮುಂಚೆ ಈ ಕಚೇರಿಗೆ ತಲಪುವಂತೆ ಅರ್ಜಿಗಳೊಡನೆ ಕಳುಹಿಸತಕ್ಕದ್ದು. ಇಲ್ಲವೇ ನಿಬಂಧನೆಗಳನ್ನು ಅನುಸರಿಸಿದಂಡ ವಿಧಿಸಲಾಗುವುದು. ರಿನ್ಯೂ ಅಧಿಕಾರಿಗಳು ಅಥವಾ ಷೆಡ್ಯೂಲ್ಡ್ ಬ್ಯಾಂಕುಗಳು 4 ನೇ ವರ್ಗದವರಿಗೆ ಕೊಡತಕ್ಕದ್ದು. ಪ್ರಾವಿಸನಲ್ ಸರ್ಟಿಫಿಕೇಟ್ 31–3–1972 ರವರೆಗೆ ಊರ್ಜಿತವಾಗುವುದು. ವಿಧಾಯಕವಾದ ಫಾರಂನಲ್ಲಿ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ಪಾವತಿ ಮಾಡಿದ ಸರ್ಟಿಫಿಕೇಟ್‌ನ್ನು ಅರ್ಜಿಯೊಡನೆ ಲಗತ್ತಿಸಿರತಕ್ಕದ್ದು.

ಸಹಿ/– ಎಕ್ಸಿಕ್ಯೂಟಿವ್ ಇಂಜಿನಿಯರ್,
ಸಿಹೆಚ್‌ಇ ವಿಭಾಗ, ಮೈಸೂರು.

ವುಡ್‌ಲಾಂಡ್ ಚಿತ್ರ ಅಮೋಘ 7 ನೇ ವಾರ
ಅಮೋಘ ಪ್ರಾರಂಭ
.... ನೂಕುನುಗ್ಗಲಲ್ಲಿ ಜನ ಬಂದು ನೋಡುತ್ತಿರುವರು ....
ಒಂದು ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ
ಗೆಜ್ಜೆ ಪೂಜೆ
ನಟವರ್ಗ– ಕಲ್ಪನ, ಅಶ್ವಥ್, ಬಾಲಕೃಷ್ಣ, ಪಂಡರಿಬಾಯಿ
[ ದಿನ 3 ಪ್ರದರ್ಶನಗಳು ]

ಆಪೆರಾ ಚಿತ್ರ ಅಮೋಘ 2 ನೇ ವಾರ
.... ಅತ್ಯಮೋಘ ಹಿಂದಿ ಚಿತ್ರ ....
ಪಾರ್ ಹಿ ಪಾರ್
ಪಾತ್ರ – ವೈಜಯಂತಿ ಮಾಲ ಧರ್ಮೇಂದ್ರ
ದಿನ 3 ಆಟಗಳು

### ಅಸ್ಸಾಂನಲ್ಲಿ ಶಿವದೇವಾಲಯ

ಗೌಹತಿ ವಾರ್ತೆ ಇದು. "ಆಲೋಕ' ಪತ್ರಿಕೆಯಲ್ಲಿನ ವಿಷಯ. ಅಸ್ಸಾಮಿನ ಮುಖ್ಯ ಮಂತ್ರಿ ಶ್ರೀ ವಿಮುಲ ಪ್ರಸಾದ್ ಚಲಿಯಾರವರು ಲೋಹಿತ್ ಜಿಲ್ಲಾ ಪರಶುರಾಮ ತೀರ್ಥಸ್ಥಾನದಲ್ಲಿ ಶಿವದೇವಾಲಯವನ್ನು ಉದ್ಘಾಟಿಸುತ್ತಾ, 'ಧರ್ಮವು ಐಕ್ಯತೆಯ ಮಾರ್ಗ ಸೃಷ್ಟಿಸುತ್ತದೆ; ಅನೈಕ್ಯತೆಯನ್ನು ನಿರುತ್ಸಾಹಗೊಳಿಸುತ್ತದೆ; ಆದ್ದರಿಂದ ಈ ಶಿವದೇವಾಲಯವು ಸರಿಯಾದ ಐಕ್ಯಮತ್ಯ ಮಾರ್ಗ ಸ್ಥಾಪಿಸುತ್ತದೆಂದು ಆಶಿಸಲಾಗಿದೆ' ಎಂದು ಹೇಳಿದರು.

ಆಗ, ನೇಫಾದಲ್ಲಿ ಆಡಳಿತ ಗೌರ್ನರರಿಗೆ ಸಲಹೆಗಾರರಾದ ಶ್ರೀ ಲಲಿತ್ ರಾಯ್‌ರವರ "ನನಗೆ ಎಲ್ಲ ಕಡೆಗಳಲ್ಲಿಯೂ ಐಕ್ಯಮತ್ಯ ಬೇಕಾಗಿದೆ; ಎಲ್ಲರೀತಿಯ ಐಕ್ಯಮತ್ಯ ಹೊಂದಲು ಪ್ರಯತ್ನಿಸುವುದು ಪ್ರತಿ ಭಾರತೀಯನ ಕರ್ತವ್ಯವಾಗಿದೆ; ನಿಜವಾದ ಐಕ್ಯತೆಗೆ ಈ ದೇವಾಲಯವು ಸರಿಯಾದ ಸ್ಥಳವಾಗಿದೆಯೆಂದು ಆಶಿಸಲಾಗಿದೆ" ಎಂದು ಹೇಳಿದರು.

† ಕಾಂಗ್ರೆಸ್ ಮುಖ್ಯಮಂತ್ರಿಯವರು, ಎಲ್ಲ ಜನರಲ್ಲಿ ನಿಜವಾದ ಐಕ್ಯತೆ ಸಾಧನೆಗಾಗಿ ಶಿವದೇವಾಲಯವನ್ನು ಉದ್ಘಾಟಿಸುವುದೂ, ಗೌರ್ನರವರ ಸಲಹೆಗಾರರು ಅದೇ ರೀತಿ ಅಭಿಪ್ರಾಯ ವ್ಯಕ್ತಪಡಿಸಿರುವುದೂ, ನಿಜಕ್ಕೂ ಒಂದು ಆಶ್ಚರ್ಯಕರ ವಿಷಯವೆನ್ನಬಹುದು. ಕಾಂಗ್ರೆಸ್ ಸರಕಾರದ ನೀತಿಯು ಧರ್ಮವನ್ನು ದೂಷಿಸುತ್ತಾ, ಸ್ಕೂಲುಗಳಲ್ಲಿ ಧರ್ಮಬೋಧೆಗೆ ಅವಕಾಶ ಕೊಡದಿರುವಾಗ, ಇದು ಒಂದು ರೂಢಿಯಲ್ಲಿರದ ಹೊಸ ಘಟನೆಯಾಗಿದೆ.


SHAKTI

SUDHA

A Superb Tonic





ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲೀ

ಗೋರಕ್ಷಣೆಗೆ ಬೆಂಬಲ ನೀಡಿ



Edited, Printed & Published by Dharmaprachara Nirata M S Krishna Rao ( Proprietor ) at the Satyavadi Press Chamarajpet, Mysore



ಸೌಂದರ್ಯ ರಕ್ಷಣೆಯಲ್ಲಿ

ಮೈಸೂರು

ಶ್ರೀಗಂದದ

ಸಾಬೂನಿಗಿಂತ

ಮಿಗಿಲಾದ ಸಾಬೂನು

ಮತ್ತೊಂದು ಇಲ್ಲ

ಈ ಅತ್ಯುತ್ತಮ ಸ್ನಾನದ ಸಾಬೂನಿನಲ್ಲಿರುವ ಶ್ರೀಗಂಧದ ಎಣ್ಣೆಯು ಚರ್ಮದ ರಕ್ಷಣೆ ಮಾಡುವುದಲ್ಲದೆ ಅದಕ್ಕೆ ಯೌವನದ ಮೆರಗನ್ನು ನೀಡುತ್ತದೆ.

ಆಯ್ಕೆಯಲ್ಲಿ ಇದಕ್ಕಿಂತ ಮಿಗಿಲಾದ ಸಾಬೂನು ಇನ್ನೊಂದಿಲ್ಲ

●★●

ಮೈಸೂರು ಸರಕಾರದ

ಸಾಬೂನು ಕಾರ್ಖಾನೆ,

ಬೆಂಗಳೂರು 12



ದೇಶದ ಹಿತಕಾಗಿ

ಕುಟುಂಬ ಯೋಜನೆ